ಸಿಆರ್‌ಎಫ್ ಯೋಜನೆ ಅಡಿಯಲ್ಲಿ ಕಳುಹಿಸಿದರೆ ಕೇಂದ್ರ ಸರ್ಕಾರದವರು, ವಿಲೇಜ್ ರೋಡ್ಸ್‌ಗೆ ಮಾನ್ಯತೆ ಕೊಡುವುದಿಲ್ಲ. ಅದಕ್ಕಾಗಿ ನಾನು, ನಿಮಗೆ ಹೇಳಿದ್ದೇನೆಂದರೆ, ನಬಾರ್ಡ್-9ರಲ್ಲಿ ಅದನ್ನು ಸೇರಿಸತಕ್ಕಂತಹ ಪ್ರಯತ್ನ ಮಾಡುತ್ತೇನೆ. ನಬಾಡ್-9ನ್ನು ಮಾಡುವಾಗ ನೀವು ಹೇಳಿರತಕ್ಕಂತಹ ರಸ್ತೆಗಳನ್ನು ಸೇರಿಸಿ ಕೊಡುವಂಥದ್ದು ಮಾಡುತ್ತೇನೆಂದು ಮಾನ್ಯ ಅಧ್ಯಕ್ಷರ ಮುಖೇನ ಆಶ್ವಾಸನೆ ಕೊಡುತ್ತೇನೆ.

ಅಧ್ಯಕ್ಷರು:- ಮಾನ್ಯ ಶಿವಪ್ಪನವರೇ ನಿಮ್ಮ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದಾರೆ. ಅದು ನಾಳೆ ಬರುತ್ತದೆ. ಇಲ್ಲವೇ, ಮುಂದಿನ ಮಂಗಳವಾರ ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ:- ನಾಳೆಯೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಾದರೆ ಸೇರಿಸಿ.

ಅಧ್ಯಕ್ಷರು:- ಅದು ಮಾನ್ಯ ಮುಖ್ಯ ಮಂತ್ರಿಗಳ ವ್ಯಾಪ್ತಿಗೆ ಬರುತ್ತದೆ ಎಂದು ವರ್ಗಾಯಿಸಿದ್ದಾರೆ. ಅವರು ಬಂದಾಗ ನಾಳೆ ಇಲ್ಲ ಮುಂದಿನ ಮಂಗಳವಾರ ತೆಗೆದುಕೊಳ್ಳೋಣ. ಅವರ ಪ್ರಶ್ನೆಗಳು ಪ್ರತಿ ಮಂಗಳವಾರ ಬರುತ್ತವೆ.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಾದರೆ ನಾಳೆಯೇ ಸೇರಿಸಿದರೆ ಉತ್ತಮ. ಈಗ ಮತ್ತೆ ಅದು ಮುಂದೆ ಹೋದರೆ ಉಪಯೋಗವಿಲ್ಲ. ನಾನು ಸುಮಾರು 50 ಪ್ರಶ್ನೆಗಳನ್ನು ಕೇಳಿದ್ದೇನೆ. ಎರಡು ಪ್ರಶ್ನೆಗಳು ಬಂದಿವೆ. ಒಂದು ಪ್ರಶ್ನೆ ಕಳೆದ ಶುಕ್ರವಾರ ಸಭೆ ಅಡ್ಜರ್ನ್ ಆಗಿ ಅದು ಹೋಯಿತು. ಇನ್ನೊಂದು ಪ್ರಶ್ನೆ ಬಂದಿದೆ.

ಅಧ್ಯಕ್ಷರು:- ನಾನಾ ಕಾರಣಗಳಿಂದ ಹೌಸ್ ಅಡ್ಜರ್ನ್ ಆಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ:- ಅದನ್ನು ನಾನು ಆಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಪ್ರಶ್ನೆ ನನ್ನದು ಆ ರೀತಿ ಹೋಯಿತು. ಮತ್ತೊಂದು ಪ್ರಶ್ನೆ ಇನ್ನೊಂದು ರೀತಿ ಹೋಗುವುದು ಬೇಡ. ಇದಕ್ಕೆ ಉತ್ತರ ಕೊಡಿಸಬೇಕು.

ಜೇವರ್ಗಿ-ಚಿಕ್ಕಕೋಡಿ-ಸಂಕೇಶ್ವರ ರಸ್ತೆ ಕಾಮಗಾರಿ

158 (1444) ಶ್ರೀ ಭರಮಗೌಡ ಅ.ಕಾಗೆ(ಕಾಗವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜೇವರ್ಗಿ-ಚಿಕ್ಕಕೋಡಿ-ಸಂಕೇಶ್ವರ ರಸ್ತೆ ನಿರ್ಮಾಣ ಕಾಮಗಾರಿಯು 3 ಪ್ಯಾಕೇಜ್‌ಗಳಲ್ಲಿ ವಿಂಗಡಿಸಿದ್ದು, ಈ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಕಾಗವಾಡ-ಚಿಕ್ಕೋಡಿ ರಸ್ತೆಯು ವಾಹನಗಳ ಸಂಚಾರಕ್ಕೆ ಯೋಗ್ಯವಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಸದರಿ ಕಾಮಗಾರಿಗೆ ಎಷ್ಟು ಹಣ ಖರ್ಚು ಆಗುತ್ತದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಜೇವರ್ಗಿ-ಚಿಕ್ಕಕೋಡಿ-ಸಂಕೇಶ್ವರ ರಾಜ್ಯ ಹೆದ್ದಾರಿ ಸಂಖ್ಯೆ 12ರ ನಿರ್ಮಾಣ ಕಾಮಗಾರಿಯನ್ನು ಜೇವರ್ಗಿ-ಬಿಜಾಪುರದವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಹಾಗೂ ಬಿಜಾಪುರದಿಂದ ಸಂಕೇಶ್ವರವರೆಗೆ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು.

ವಿವರ	ಉದ್ದ (ಕಿಮೀ.ಗಳಲ್ಲಿ)	ಪ್ರಸಕ್ತ ಹಂತ
1	2	3
1) ಜೀವರ್ಗಿ-ಮಾರಟಗಿ(ಪ್ಯಾಕೇಜ್-1)	36.80	ಕಾಮಗಾರಿ ಪ್ರಗತಿಯಲ್ಲಿದೆ.
2) ಮಾರಟಗಿ-ಸಿಂಧಗಿ(ಪ್ಯಾಕೇಜ್-2)	22.20	ಟೆಂಡರ್ ಪ್ರಕ್ರಿಯೆಪ್ರಗತಿಯಲ್ಲಿದೆ.
3) ಸಿಂಧಗಿ-ದೇವರಹಿಪ್ಪರಗಿ(ಪ್ಯಾಕೇಜ್-3)	31.00	ಟೆಂಡರ್‌ಗಳನ್ನು ತಯಾರಿಸಬೇಕಾಗಿದೆ.
4) ದೇವರಹಿಪ್ಪರಿಗೆಯಿಂದ-ಬಿಜಾಪುರ (ಪ್ಯಾಕೇಜ್-4)	29.00	ಟೆಂಡರ್‌ಗಳನ್ನು ತಯಾರಿಸಬೇಕಾಗಿದೆ.
ವಿಶ್ವಬ್ಯಾಂಕ್ ಯೋಜನೆಯಡಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ತೆಗೆದುಕೊಂಡಿರುವ ಕಾಮಗಾರಿಗಳು		
1) ಬಿಜಾಪುರ-ತಿಕೋಟ (ಮೇಲ್ದರ್ಜೆಗೇರಿಸುವುದು)	20.00	ದಿನಾಂಕ 19-2-2002ರಂದು ಕೆಲಸ ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಯನ್ನು ಡಿಸೆಂಬರ್ 2003ರೊಳಗೆ ಮುಗಿಸಲಾಗುವುದು.
2) ತಿಕೋಟ-ಅಥಣಿ (ಪುನಃಶ್ಚೇತನಗೊಳಿಸುವುದು)	43.00	ದಿನಾಂಕ 19-2-2002ರಂದು ಕೆಲಸ ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಯನ್ನು ಜೂನ್ 2003 ರೊಳಗೆ ಮುಗಿಸಲಾಗುವುದು.
3) ಅಥಣಿ-ಶೇಡ್‌ಬಾಳ್ (ಪುನಃಶ್ಚೇತನಗೊಳಿಸುವುದು)	48.00	ದಿನಾಂಕ 19-2-2002ರಂದು ಕೆಲಸ ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಯನ್ನು ಡಿಸೆಂಬರ್ 2003 ರೊಳಗೆ ಮುಗಿಸಲಾಗುವುದು
4) ಶೇಡ್‌ಬಾಳ್-ಸಂಕೇಶ್ವರ (ಪುನಃಶ್ಚೇತನಗೊಳಿಸುವುದು)	56.00	ದಿನಾಂಕ 19-2-2002ರಂದು ಕೆಲಸ ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಯನ್ನು ಡಿಸೆಂಬರ್ 2003ರೊಳಗೆ ಮುಗಿಸಲಾಗುವುದು.

ಆ) ರಸ್ತೆಯು ಕೆಟ್ಟು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಮತ್ತು ಈಗಾಗಲೇ ರಸ್ತೆಯನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಕಾಮಗಾರಿಯು ಸಂಕೇಶ್ವರದಿಂದ ಪ್ರಗತಿಯಲ್ಲಿದ್ದು, ಕಾಗವಾಡ ಕಡೆಗೆ ಮುಂದುವರಿಯುತ್ತದೆ. ಕಾಗವಾಡ-ಚಿಕ್ಕೋಡಿ ರಸ್ತೆಯ ತಳಪಾಯ ಬಲಪಡಿಸಲು ವಿನ್ಯಾಸವನ್ನು ಮಾರ್ಪಡಿಸಲಾಗಿದೆ ಮತ್ತು ಅದರಂತೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಇ) ಶೆಡಬಾಳ್‌ದಿಂದ ಸಂಕೇಶ್ವರವರೆಗಿನ ರಸ್ತೆಯ ಅಂದಾಜು ಮೊತ್ತವು ರೂ. 12.29 ಕೋಟಿಗಳಾಗಿರುತ್ತದೆ. ಫೆಬ್ರವರಿ 2003ರ ಅಂತ್ಯದವರೆಗೆ ರೂ. 1.61 ಕೋಟಿ ವೆಚ್ಚವಾಗಿದೆ.

ಶ್ರೀ ಭರಮಗೌಡ ಅ. ಕಾಗೆ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಜೇವರ್ಗಿ-ಸಂಕೇಶ್ವರ ಹೆದ್ದಾರಿಯನ್ನು ಕೆಲವು ಪ್ಯಾಕೇಜ್‌ಗಳಾಗಿ ಅವರು ಟೆಂಡರ್ ಕೊಟ್ಟಿದ್ದಾರೆ. ಆದರೆ ಈಗ ಅಥಣಿ-ಶೇಡ್‌ಬಾಳ್ 48 ಕಿ.ಮೀ ಶೇಡ್‌ಬಾಳ್-ಸಂಕೇಶ್ವರ 56 ಕಿ.ಮೀ ರಸ್ತೆಯ ಕೆಲಸವನ್ನು ದಿನಾಂಕ 19.2.02ರಂದು ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಯನ್ನು ಡಿಸೆಂಬರ್ 2003ರ ಒಳಗೆ ಮುಗಿಸಲಾಗುವುದು ಎಂದು ಉತ್ತರ ಹೇಳಿದ್ದಾರೆ. ಸುಮಾರು 13 ತಿಂಗಳುಗಳಿಂದ ಇಲ್ಲಿ 25 ಪರ್ಸೆಂಟ್ ಕೆಲಸವೂ ಆಗಿಲ್ಲ. ಇನ್ನು ಕೇವಲ 10 ತಿಂಗಳುಗಳಲ್ಲಿ ಉಳಿದಿರುವಂತಹ 75 ಪರ್ಸೆಂಟ್ ಕೆಲಸವನ್ನು ಮಾಡುತ್ತೇವೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಇದು ಬಹಳ ಅತಿಶಯೋಕ್ತಿ ಆಗುತ್ತದೆ. ಅಲ್ಲಿಯ ಕೆಲಸ ನೋಡಿದರೆ ಅಲ್ಲಿಯ ಕಾಮಗಾರಿ ಆಮೆ ನಡಿಗೆಯಲ್ಲಿ ನಡೆಯುತ್ತಿದೆ. ಈ ತರಹ ಈ ಕಂಟ್ರಾ ಕ್ಟರ್ ಕೆಲಸ ಮಾಡಿದರೆ ಇನ್ನು ಎರಡು ವರ್ಷಗಳಾದರೂ ಈ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಇದು ಮೊದಲನೇ ಪ್ರಶ್ನೆ. ಎರಡನೇ ಪ್ರಶ್ನೆ ಏನೆಂದರೆ, ಈ 56 ಕಿ.ಮೀ ರಸ್ತೆಗೆ 12.29 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಶೆಡಬಾಳ್ ಮತ್ತು ಸಂಕೇಶ್ವರದಲ್ಲಿ ಒಂದು ಕಿ.ಮೀ ರಸ್ತೆಗೆ 25 ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಉಳಿದ ಕಡೆಗಳಲ್ಲಿ ಒಂದು ಕಿ.ಮೀ ರಸ್ತೆಗೆ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ನನ್ನ ಮತ ಕ್ಷೇತ್ರವಿರುವುದು, ಶೆಡ್‌ಬಾಳ್‌ನಿಂದ ಸಂಕೇಶ್ವರದವರೆಗೆ ಅಲ್ಲಿ ಕರಿ ಮಣ್ಣಿನ ಜಮೀನು ಇರುವುದರಿದ ಯಾವಾಗಲೂ ಅಲ್ಲಿ ಕೊರೆತವಾಗುವುದರಿಂದ ಈ 22ಲಕ್ಷ ರೂಪಾಯಿಗಳು ಅಲ್ಲಿ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನ ಹಣವನ್ನು ಕೊಟ್ಟು ಅಲ್ಲಿ ಕೆಲಸವನ್ನು ಮಾಡಿಸಬೇಕು. ಇನ್ನು ಮೂರನೆಯದಾಗಿ, ಕಾಗವಾಡದಿಂದ ಅಂಕಲಿಮಠದ ರಸ್ತೆ ಕೆಟ್ಟು ಹೋಗಿರುವುದರಿಂದ ಅಲ್ಲಿ ಓಡಾಡುವುದಕ್ಕೆ ತೊದರೆ ಇದೆ. ಅದು ಹೆದ್ದಾರಿ ಇರುವುದರಿಂದ ಎಲ್ಲಿ ಒಳ್ಳೆಯ ರಸ್ತೆ ಇದೆ ಅಲ್ಲಿ ಅಂದರೆ ಸಂಕೇಶ್ವರ್ ಕಡೆಗೆ ಇರುವ ಒಳ್ಳೆಯ ರಸ್ತೆಯನ್ನು ಅವರು ರಿಪೇರಿ ಮಾಡುತ್ತಿದ್ದಾರೆ. ಆ ರಸ್ತೆಯನ್ನು ಮೊದಲನೇ ಹಂತದಲ್ಲಿ ರಿಪೇರಿ ಮಾಡುತ್ತಿದ್ದಾರೆ. ಆದರೆ ಎಲ್ಲಿ ಕೆಟ್ಟ ರಸ್ತೆಗಳಿವೆ ಅಲ್ಲಿ ರಿಪೇರಿ ಮಾಡಿ ಎಂದು ನಾನು ಎರಡು ವರ್ಷಗಳಿಂದ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದೇನೆ. ಕೆಡಿಪಿ ಮೀಟಿಂಗ್‌ನಲ್ಲಿ ಹೇಳಿದ್ದೇವೆ. ಮತ್ತು ಮೊನ್ನೆ ನಮ್ಮ ರಾಜ್ಯದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್. ಪಾಟೀಲ್‌ರವರು ಬಂದಾಗ ಕೂಡ ಹೇಳಿದ್ದೇವೆ. ಕಾಗವಾಡದಿಂದ ಅಂಕಲಿಯವರೆಗೆ ಮೊದಲ ಪ್ರಾತಿನಿಧ್ಯ ನೀಡಿ ಕೆಲಸ ಮಾಡುವುದಕ್ಕೆ ನಾವು ಹೇಳುತ್ತೇವೆ ಎಂದು ಹೇಳಿದರು. ಎರಡು ವರ್ಷಗಳಿಂದ ನಾನು ಸತತವಾಗಿ ಹೇಳುತ್ತಿದ್ದರೂ ಯಾವುದೇ ಪರಿಣಾಮವಾಗಿಲ್ಲ. ಆದ್ದರಿಂದ ಕಾಗವಾಡದಿಂದ ಅಂಕಲಿಯವರೆಗೆ ಮೊದಲ ಪ್ರಾತಿನಿಧ್ಯ ನೀಡಿ ಕೆಲಸ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಪ್ಯಾಕೇಜ್ ಟೆಂಡರ್ ಎಂದು ತೆಗೆದುಕೊಂಡು ಕಾಂಟ್ರಾ ಕ್ಟರ್ ಎಲ್ಲಿ ಒಳ್ಳೆ ರಸ್ತೆ ಇದೆ ಅಲ್ಲಿ ಅಷ್ಟೇ ರಸ್ತೆ ರಿಪೇರಿ ಮಾಡುತ್ತಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಎಲ್ಲಿ ರಸ್ತೆ ಹೆಚ್ಚಿಗೆ ಕೆಟ್ಟಿದೆ ಅಲ್ಲಿ ಮೊದಲು ಮಾಡಿ ನಂತರ ಒಳ್ಳೆಯ ರಸ್ತೆಗಳ ರಿಪೇರಿಗಳನ್ನು ಮಾಡಬೇಕು.

ಅಧ್ಯಕ್ಷರು:- ಇದು ಭಾಷಣ ಆಯಿತು, ಪ್ರಶ್ನೆ ಅಲ್ಲ. ನೀವು ಕೇಳಿರುವ ಪ್ರಶ್ನೆಗಳಿಗೆ ಅವರು ಮೊದಲು ಉತ್ತರ ಹೇಳಲಿ; ನೀವು ಕುಳಿತುಕೊಳ್ಳಿ.

ಶ್ರೀ ಉಮೇಶ್ ವಿ.ಕತ್ತಿ:- ಮಾನ್ಯ ಅಧ್ಯಕ್ಷರೆ, ಇದು ಜೇವರ್ಗಿ-ಸಂಕೇಶ್ವರ ರಸ್ತೆ ಗಡಿ ಭಾಗದಲ್ಲಿ ಬರತಕ್ಕಂತಹ ರಸ್ತೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಭಾಗಗಳು ಕೂಡುವಂತಹ ರಸ್ತೆ. ವಿಶೇಷವಾಗಿ ಕಾಗವಾಡದಿಂದ ಅಂಕಲಿಯವರೆಗೆ ಸುಮಾರು 27 ಕಿ.ಮೀ ಪೂರ್ತಿ ಕಪ್ಪು ಮಣ್ಣು ಬರುತ್ತದೆ. ಇದು ವರ್ಲ್ಡ್‌ಬ್ಯಾಂಕ್ ಯೋಜನೆಯಲ್ಲಿ ಮಂಜೂರಾದ ರಸ್ತೆ. ಅಲ್ಲಿ ಕಪ್ಪು ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಇವರು ಇಟ್ಟಿರುವಂತಹ ಹಣ ಅದಕ್ಕೆ ಸಾಕಾಗುವುದಿಲ್ಲ, ಇದು ನನ್ನ ವೈಯುಕ್ತಿಕ ಅಭಿಪ್ರಾಯ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಪೂರ್ತಿಯಾಗಿ ಕಾಂಕ್ರೀಟ್ ರಸ್ತೆ ಮಾಡಬೇಕೆಂಬುದು ನನ್ನ ಅನಿಸಿಕೆ. ಆ ದಿಸೆಯಲ್ಲಿ ವಿಶೇಷವಾಗಿ ಅಂಕಲಿಯಿಂದ ಕಾಗವಾಡದವರೆಗೆ ಕಪ್ಪು ಮಣ್ಣು ಬರುವುದರಿಂದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಮಾಡಬೇಕು. ಇಲ್ಲದಿದ್ದರೆ ಅಲ್ಲಿ ಸರಿಯಾದ ರಸ್ತೆ ಮಾಡುವುದಕ್ಕಾಗಿ ಈಗ ಹಾಕಿರುವ ಕಾರ್ಯಕ್ರಮದಿಂದ ಸಾಧ್ಯವಾಗುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ತಾವೇ ಖುದ್ದಾಗಿ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಅದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು 10 ತಿಂಗಳುಗಳಲ್ಲಿ ಉಳಿದಿರುವಂತಹ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಕಾಂಟ್ರಾಕ್ಟ್‌ದಾರರಿಗೆ ಹೆಚ್ಚಿನ ಒತ್ತು ಕೊಟ್ಟು ಕೂಡಲೇ ಆ ಕೆಲಸ ಮುಗಿಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜುಕಾಗೆಯವರ ಪ್ರಶ್ನೆ ಏನಿದೆ ಆ ರಸ್ತೆಯನ್ನು ಸನ್ಮಾನ್ಯ ಧರ್ಮಸಿಂಗ್‌ರವರು ನೋಡಿದ್ದಾರೆ. ಕಾಗವಾಡ ಕ್ಷೇತ್ರದ ಜನರ ಅಭಿವೃದ್ಧಿ ದೃಷ್ಟಿಯಿಂದಾಗಿ ಮತ್ತೇನನ್ನೂ ಕೇಳುವುದಿಲ್ಲ. ಅಲ್ಲಿ ಸಾಕಷ್ಟು ಒಳ್ಳೆಯ ಭೂಮಿ ಇದೆ, ನೀರು ಸಿಗುತ್ತದೆ, ಕೃಷ್ಣಾ ನೀರೂ ಕೂಡ ಅವರಿಗೆ ಸಿಗುತ್ತದೆ. ಅವರು ಬೆಳೆಗಳನ್ನು ಬೆಳೆಯುವ ದೃಷ್ಟಿಯಿಂದ ಪ್ರಮುಖವಾಗಿ ಕೇಳತಕ್ಕಂಥದ್ದು ಬರೀ ರಸ್ತೆಗಳನ್ನು ಮಾತ್ರ. ಇದನ್ನು ಒಂದು ಸ್ಪೆಷಲ್ ಕೇಸ್ ಎಂದು ಪರಿಗಣಿಸಿ ಅದನ್ನು ಸಿಮೆಂಟ್ ರೋಡ್ ನೀವು ಮಾಡದೆ ಹೋದರೆ, 20 ಲಕ್ಷ ರೂ. ಅಲ್ಲ, ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಮತ್ತೆ ಆ ರಸ್ತೆ ಕುಸಿದುಕೊಂಡು ಹೋಗುತ್ತಿರುತ್ತದೆ. ಇದು ಸುಮಾರು 20-25 ವರ್ಷಗಳಿಂದ ಇರುವಂತಹ ಬೇಡಿಕೆ. ಇದನ್ನು ದಯಮಾಡಿ ಮಾಡಬೇಕು. ನೀವು ವರ್ಲ್ಡ್ ಬ್ಯಾಂಕಿನಿಂದ ಏನು ಸಾಲ ತೆಗೆದುಕೊಳ್ಳುತ್ತೀರಿ ಅದರಲ್ಲಿ ವಿಶೇಷವಾಗಿ ಈ ಕೆಲಸವನ್ನು ಸೇರಿಸಲಿಕ್ಕೆ ಸಾಧ್ಯವಿದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಜೇವರ್ಗಿ-ಸಂಕೇಶ್ವರ್ ರಸ್ತೆ ಏನಿದೆ ಇದು ಗುಲ್ಬರ್ಗ, ಬಿಜಾಪುರ, ಬೆಳಗಾಂ ಜಿಲ್ಲೆಗಳಿಗೆ ಸಂಪರ್ಕ ಮಾಡುವ ರಸ್ತೆಯಾಗಿದೆ. ಆದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಶಾಸಕರುಗಳು ಕೂಡ ಹೇಳಿದ್ದಾರೆ. ವಿಶೇಷವಾಗಿ ಸಿಂಧ್ಯರವರು ಮತ್ತು ನಮ್ಮ ಮಾಜಿ ಲೋಕೋಪಯೋಗಿ ಸಚಿವರು ಮತ್ತು ಶ್ರೀಮಾನ್ ಕಟ್ಟಿಯವರು ಕೂಡ ಹೇಳಿದ್ದಾರೆ. ವರ್ಲ್ಡ್ ಬ್ಯಾಂಕ್‌ನಿಂದ ಅಪ್‌ಗ್ರಡೇಷನ್ ವರ್ಕ್ ಇದೆ ಮತ್ತು ರಿಹ್ಯಾಬಿಲಿಟೇಷನ್

ವರ್ಕ್ ಇದೆ. ಎಲ್ಲಿ ಅಪ್‌ಗ್ರೆಡೇಷನ್ ಇದೆ. ಬ್ಲಾಕ್ ವಾಟರ್ ಸಾಯಿಲ್ ಇದೆ, ಅಲ್ಲಿ ಒಂದು ಕಿ.ಮೀಗೆ ರಸ್ತೆಗೆ 70 ಲಕ್ಷದಿಂದ ಒಂದು ಕೋಟಿ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ; ಎಲ್ಲಿ ರಿಹ್ಯಾಬಿಲಿಟೇಷನ್ ಇದೆ, ಅಲ್ಲಿ ಪ್ರತಿ ಕಿ.ಮೀಗೆ 40 ರಿಂದ 45 ಲಕ್ಷ ರೂಪಾಯಿ ಖರ್ಚು ಮಾಡಿ ಕೆಲಸ ಮಾಡುತ್ತಿದ್ದೇವೆ. ಈಗಾಗಲೇ ಬಿಜಾಪುರ ಮತ್ತು ತಿಕೋಟದಲ್ಲಿ 15.32 ಕೋಟಿ ರೂಪಾಯಿ ಅಪ್‌ಗ್ರಡೇಷನ್ ವರ್ಕ್ ಇದೆ, ಅಲ್ಲಿ ಕೆಲಸ ಪ್ರಾರಂಭ ಮಾಡಿದ್ದೇವೆ. ನಾನು ಮತ್ತು ಉಸ್ತುವಾರಿ ಸಚಿವರು, ಸಂಬಂಧಪಟ್ಟಂತಹ ಶಾಸಕರ ಜೊತೆಯಲ್ಲಿ ಹೋಗಿ ಖುದ್ದಾಗಿ ನೋಡಿ ಬಂದಿದ್ದೇವೆ. ಅಲ್ಲಿ ರೋಹನ್ ಕನ್‌ಸ್ಟ್ರಕ್ಷನ್ ಕಂಪನಿಯವರು ಕೆಲಸ ಮಾಡುತ್ತಿದ್ದಾರೆ. ಟಾರ್ಬತ್ ಕಂಪನಿಯವರೂ ಕೂಡ ಕೆಲಸ ಮಾಡುತ್ತಿದ್ದಾರೆ. ರಿಹ್ಯಾಬಿಲಿಟೇಷನ್ ಕೆಲಸ ಕೂಡ ಕಾಗವಾಡದಿಂದ ಚಿಕ್ಕೋಡಿವರೆಗೆ ಮಾಡುವುದಿದೆ. ಮಾನ್ಯ ಸಿಂಧ್ಯಾರವರೇ, ತಾವು ಚುನಾವಣೆಗೆ ಹೋಗಿ ಬಂದ ಮೇಲೆ ಫೋನ್ ಮುಖಾಂತರ ಅಟ್‌ಲೀಸ್ಟ್ ಆ ರೋಡ್ ಮಾಡಿ ಎಂದು ಹೇಳಿದ್ದೀರಿ. ಇವತ್ತು ಏನಾಗಿದೆ ಎಂದರೆ, 2,300 ಕಿ.ಮೀ ರಸ್ತೆಗೆ ವರ್ಲ್ಡ್ ಬ್ಯಾಂಕಿನಿಂದ 2030 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಂಡ ಮೇಲೆ government has provided Rs. 393 crores in the budget. ನಮ್ಮ ಫೈನಾನ್ಸ್‌ನವರು ಬೇರೆ ಹೇಳುತ್ತಾರೆ. ಇದಕ್ಕೆ ವಿಶ್ವಬ್ಯಾಂಕ್‌ನಿಂದ ಹಣ ಬಂದಿದೆ, ಇದಕ್ಕೆ ನಾವು ಬೇರೆ ಹಣ ಕೊಡುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಅಲ್ಲಿ ರಸ್ತೆ ಕೆಟ್ಟು ಹೋಗಿರುವುದು ನನಗೆ ಗೊತ್ತಿದೆ. ಆದರೆ ಇವತ್ತು ನಾವು ಜೇವರ್ಗಿ-ಮೋರಟಗಿ ಮತ್ತು ಮೋಟಗಿಲ್‌ನಿಂದ ಸಿಂಧಗಿಯವರೆಗೆ ಈಗಾಗಲೇ 56 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಕೆಲಸ ಪ್ರಾರಂಭವಾಗಿದೆ. ಬಿಜಾಪುರದಿಂದ ತಿಕೋಟ, ತಿಕೋಟದಿಂದ ಮತ್ತೆ ಅಥಣಿಗೆ ಹೋಗುವ ಹಾದಿಯಲ್ಲಿ ಕೂಡ ಇವತ್ತು ಕೆಲಸ ಮಾಡಬೇಕಾಗಿದೆ. They have taken in the rehabilitation works. ರಿಹ್ಯಾಬಿಲಿಟೇಷನ್‌ನಲ್ಲಿ ತೆಗೆದುಕೊಂಡ ಮೇಲೆ ವಿ.ಎಸ್. ಲಕ್ಷ್ಮಣ್ ಎನ್ನುವವರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಬ್ಲಾಕ್ ವಾಟರ್ ಸಾಯಿಲ್ ಇದೆ, ರಿಹ್ಯಾಬಿಲಿಟೇಷನ್ ಸರಿಯಾಗಿ ಮಾಡುವುದಕ್ಕಾಗುತ್ತಿಲ್ಲ, ಮಾನ್ಯ ಕತ್ತಿಯವರು ಸಿಮೆಂಟ್ ರೋಡ್ ಮಾಡಬೇಕೆಂದು ಹೇಳಿದರು, ಅದರಂತೆ ನಾವು ವರ್ಲ್ಡ್ ಬ್ಯಾಂಕನವರಿಗೆ ರಿಕ್ವೆಸ್ಟ್ ಮಾಡಿದ್ದೇವೆ. ವರ್ಲ್ಡ್ ಬ್ಯಾಂಕ್‌ನವರು ಕೂಡ ಇದಕ್ಕೆ 6.50 ಕೋಟಿ ರೂ. ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ವಿಶೇಷವಾಗಿ ಕಾಗವಾಡ ಮತ್ತು ಚಿಕ್ಕೋಡಿ ರಸ್ತೆಯನ್ನು ಮಾಡುವ ಕೆಲಸವನ್ನು ಕೂಡ ನಾವು ಮಾಡುತ್ತೇವೆ.

ಶ್ರೀ ಭರಮಗೌಡ ಅ.ಕಾಗೆ:- ಶೆಡ್‌ಬಾಳ್‌ದಿಂದ ಸಂಕೇಶ್ವರದವರೆಗೆ 12.29 ಕೋಟಿರೂಪಾಯಿಗಳಾಗುತ್ತವೆ ಎಂದು ಹೇಳಿದಿರಿ, ಅಂದರೆ ಅಷ್ಟು ಹಣ ಸಾಕಾಗುವುದಿಲ್ಲ. ಅದಕ್ಕೆ ಹೆಚ್ಚಿನ ಹಣ ತೆಗೆದುಕೊಂಡು ಕಾಗವಾಡದಿಂದ ಚಿಕ್ಕೋಡಿಗೆ ಮೊದಲ ಆದ್ಯತೆ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಧರ್ಮಸಿಂಗ್:- ಒಟ್ಟಾರೆ ಇದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಇದಕ್ಕೆ ನಾವು ವರ್ಲ್ಡ್ ಬ್ಯಾಂಕ್‌ಗೆ ಬರೆದು, ವರ್ಲ್ಡ್ ಬ್ಯಾಂಕ್‌ನವರು ಬಂದು ನೋಡಿದ ನಂತರ ಮಾಡಬೇಕಾಗುತ್ತದೆ. ಅಲ್ಲಿಯವರೆಗೆ ಕೆಲಸ ನಡೆಯುತ್ತಿರಲಿ, ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಈಗ ರಸ್ತೆ ಎಲ್ಲಿ ಬಹಳ ಕೆಟ್ಟು ಹೋಗಿದೆ ಅಲ್ಲಿ ಕೂಡ ನಾವು ಕೆಲಸ ಪ್ರಾರಂಭ ಮಾಡುವ ವ್ಯವಸ್ಥೆ ಮಾಡುತ್ತೇವೆ.